ಶ್ರೀ ಎಸ್.ಎಸ್. ಪಾಟೀಲ್: ನೀವು ಅಲ್ಲಿಯೇ ತಪ್ಪು ಮಾಡಿರುವುದು, ದಯಮಾಡಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ, ಅದನ್ನು ಅರ್ಧಗಂಟೆಗಳ ಕಾಲ ಚರ್ಚೆಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ಆಯಿತು, ಬರೆದು ಕಳುಹಿಸಿ; ನೆಕ್ಸ್ಟ್ ಮಾನ್ಯ ಡಿ.ಆರ್. ಪಾಟೀಲ್.

ಶ್ರೀ ಡಿ. ಆರ್. ಪಾಟೀಲ್: ಆಸೆಸ್ಡ್ ಯೀಲ್ಡ್ ಕ್ಯಾಲಿಕ್ಯುಲೇಟ್ ಏನು ಮಾಡುತ್ತಾರೆ. ಅದಕ್ಕೆ ಅವರೊಂದು ಫಾರ್ಮುಲ ಮಾಡಿಕೊಂಡಿದ್ದು, ಅದರೊಳಗೆ 19.6 ಪರ್ಸೆಂಟ್ ಕಾಳು ಬಂದ ಹಾಗೆ ಎಂದು ಹಿಡಿಯುತ್ತಾರೆ. ಹಸಿದು ಕೂಡ ಮಾಡಿ, ಅದರ ಡ್ರೈಯೇಜ್ ತೆಗೆಯುತ್ತಾರೆ. 19.6 ಪರ್ಸೆಂಟ್ ಕಾಳು ಬಂದ ಹಾಗೆ ಎಂದು ಮಾಡುತ್ತಾರೆ. ನಮ್ಮಲ್ಲಿ ಕಾಳೇ ಬಂದಿಲ್ಲ. ಅದಕ್ಕಾಗಿ ಈ ಪದ್ಧತಿ ರಾಂಗ್ ಇದೆ, ಅದರಿಂದ ಬಹಳ ಮಂದಿ ರೈತರಿಗೆ ಲುಕ್ಸಾನು ಆಗುತ್ತದೆ. ಅದಕ್ಕೆ ದಯಮಾಡಿ ಇದರ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆದು, ಇದನ್ನು ಮೊದಲು ಬದಲಿ ಮಾಡಿಸಬೇಕು. ಈ ವರ್ಷದ್ದು ಕಾಳು ಬಂದಿದೆಯೋ ಇಲ್ಲವೆಂದು ವಿಚಾರ ಮಾಡುತ್ತಿರುವಾಗ ಹಿಂದಿನದು ಏನೋ ಮಾಡಿಕೊಂಡು ಒಂದು ಸ್ಟ್ಯಾಂಡರ್ಡ್ ತೆಗೆದು ಇಷ್ಟು ಕಾಳು ಬರಬೇಕು ಎಂದರೆ ಕಾಳು ಸೆಟ್ಟಿಂಗ್ ಆಗಿಲ್ಲವೆಂದರೆ ಹೇಗೆ?

ಶ್ರೀ ವಿ.ಎಸ್. ಕೌಜಲಗಿ: ತಮ್ಮ ಸಲಹೆ ಉತ್ತಮವಿದೆ. ಇದಕ್ಕೆ ಪ್ರಯತ್ನಿಸುತ್ತೇನೆ.

ಜಲಸಂರಕ್ಷಣೆ ಯೋಜನೆ ಬಗ್ಗೆ

57(23) ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ್ (ತುರುವೇಕೆರೆ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಲಸಂರಕ್ಷಣೆ ಯೋಜನೆಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಆ) ಒಂದು ಸಾವಿರ ಗ್ರಾಮಪಂಚಾಯ್ತಿಯ ಈ ಯೋಜನೆಯಲ್ಲಿ ತುರುವೇಕೆರೆ ತಾಲ್ಲೂಕಿನ 26 ಗ್ರಾಮ ಪಂಚಾಯ್ತಿ ಗಳು ಸೇರಿವೆಯೇ;

ಇ) ಇಲ್ಲದಿದ್ದಲ್ಲಿ, ಈ ಪಂಚಾಯ್ತಿಗಳನ್ನು ಸೇರಿಸಲಾಗುವುದೇ?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು):

ಅ) ಜಲಸಂವರ್ಧನೆ ಯೋಜನೆಯನ್ನು ಮಾನ್ಯ ಮುಖ್ಯ ಮಂತ್ರಿಯವರು ದಿನಾಂಕ: 5-6-2002 ರಂದು ಉದ್ಘಾಟಿಸುವುದರೊಂದಿಗೆ ಯೋಜನೆಯನ್ನು ಪ್ರಾರಂಭಿಸಲಾಗಿದೆ.

ಆ) ಯೋಜನೆಯ ಮೊದಲನೇ ಹಂತದಲ್ಲಿ ಕೈಗೊಂಡಿರುವ ಕಾರ್ಯಕ್ರಮದ ಪ್ರಕಾರ ತುರುವೇಕೆರೆ ತಾಲ್ಲೂಕು ಸೇರ್ಪಡೆಯಾಗಿರುವುದಿಲ್ಲ.

ಇ) ಯೋಜನೆಯ ಎರಡನೇ ಹಂತದಲ್ಲಿ ತುರುವೇಕೆರೆ ತಾಲ್ಲೂಕು ಸೇರಿಸಲು ಮಾರ್ಗಸೂಚಿಗಳ ಅನುಸಾರ ಪರಿಶೀಲಿಸಲಾಗುವುದು.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ: ನನ್ನ (ಅ) ಪ್ರಶ್ನೆಗೆ ಇವರು ಜಲಸಂವರ್ಧನೆ ಯೋಜನೆಯನ್ನು ಮಾನ್ಯ ಮುಖ್ಯಮಂತ್ರಿಗಳು 5-6-2002ರಂದು ಉದ್ಘಾಟನೆ ಮಾಡುವುದರೊಂದಿಗೆ ಈ ಯೋಜನೆ ಪ್ರಾರಂಭವಾಯಿತು ಎಂದು ಉತ್ತರ ಕೊಟ್ಟಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅವರ ಪ್ರಶ್ನೆಯ ಉದ್ದೇಶ ಬೇರೆ. ಅವರು ರೂರಲ್ ಡೆವಲೆಪ್‌ಮೆಂಟ್ ಮಿನಿಸ್ಟರ್ ಅನಾನ್ಸ್ ಮಾಡಿದಂಥ ಜಲಸಂರಕ್ಷಣೆ ಯೋಜನೆ, ಏನು ಮಧ್ಯಪ್ರದೇಶದಲ್ಲಿ ಜಾರಿಯಲ್ಲಿದೆ, ಆ ಮಾದರಿಯಲ್ಲಿ ಕರ್ನಾಟಕದಲ್ಲಿ ಕೂಡ ಮಾಡುತ್ತೀರೋ ಹೇಗೋ ಎಂದು ಕೇಳಿದಂಥ ಪ್ರಶ್ನೆ. ಆದರೆ ನಮ್ಮ ಕಡೆ ಆ ಪ್ರಶ್ನೆ ವರ್ಗ ಮಾಡಿದ್ದಕ್ಕೆ ಅದನ್ನು ನಮ್ಮಲ್ಲಿ ಅರ್ಥ ಮಾಡಿಕೊಂಡು ಜಲಸಂವರ್ಧನೆ ಯೋಜನೆ ಎಂದು ತಿಳಿದುಕೊಂಡು ಉತ್ತರವನ್ನು ಕೊಟ್ಟಿದ್ದಾರೆ. ಅದಕ್ಕಾಗಿ ಆ ಮಧ್ಯಪ್ರದೇಶದ ಮಾದರಿಯಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಮಾಡತಕ್ಕಂಥ ಜಲಸಂರಕ್ಷಣೆ ಯೋಜನೆ ಏನು ಇದೆ, ಇದಕ್ಕೆ ಮಾನ್ಯ ಘೋರ್ಪಡೆಯವರು ಒಂದು ಯೋಜನೆಯನ್ನು ತಯಾರು ಮಾಡುತ್ತಿದ್ದಾರೆ; ಅದಕ್ಕಾಗಿ ದಯಮಾಡಿ ಇದನ್ನು ರೂರಲ್ ಡೆವಲೆಪ್‌ಮೆಂಟ್ ಇಲಾಖೆಗೆ ಈ ಪ್ರಶ್ನೆಯನ್ನು ಟ್ರಾನ್ಸ್‌ಫರ್ ಮಾಡಿದರೆ ಅಲ್ಲಿ ಅವರಿಗೆ ಸೂಕ್ತವಾದಂಥ ಉತ್ತರ ಸಿಗುತ್ತದೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ: ಸಚಿವರು ಹೇಳತಕ್ಕಂಥ ಉತ್ತರ ಸರಿಯಿದೆ. ಆದರೆ ನಮಗೆ ಬಂದಿರತಕ್ಕಂಥ ಉತ್ತರ ತಪ್ಪಾಗಿರುವುದರಿಂದ ನಾನು ಕೇಳಬೇಕಾಗುತ್ತದೆ.

ಅಧ್ಯಕ್ಷರು: ಅದು ಆ ಡಿಪಾರ್ಟ್‌ಮೆಂಟಿಗೆ ಪ್ರಶ್ನೆ ಇರುವುದು, ಅದಕ್ಕೆ ನನಗೆ ಸಂಬಂಧವಿಲ್ಲ, ಅದನ್ನು ಆ ಡಿಪಾರ್ಟ್‌ಮೆಂಟ್‌ಗೆ ಟ್ರಾನ್ಸ್‌ಫರ್ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ: ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇದಕ್ಕೆ ಉತ್ತರ ಹೇಳಬೇಕಾಗುತ್ತದೆ.

ಅಧ್ಯಕ್ಷರು: ಅವರು ಇಲ್ಲಿ ಇಲ್ಲವಲ್ಲಾ, ಟ್ರಾನ್ಸ್‌ಫರ್ ಮಾಡಿ ಇನ್ನೊಂದು ದಿವಸ ತೆಗೆದುಕೊಂಡರಾಯಿತು ಬಿಡಿ.

ಕಾವೇರಿ ನದಿ ಜಲಾಶಯದಿಂದ ತಮಿಳುನಾಡಿಗೆ ಬಿಟ್ಟಿರುವ ನೀರಿನ ಪ್ರಮಾಣ

58(257) ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಕಾವೇರಿ ನದಿ ಜಲಾಶಯಗಳಿಂದ ತಮಿಳುನಾಡಿಗೆ ಬಿಟ್ಟಿರುವ ನೀರಿನ ಪ್ರಮಾಣ ಎಷ್ಟು? (ವರ್ಷವಾರು ವಿವರಗಳನ್ನು ಕೊಡುವುದು)

ಆ) ಈ ಪ್ರಮಾಣವು ಒಪ್ಪಂದಗಳ ಮಿತಿಯೊಳಗೆ ಇದೆಯೇ ಅಥವಾ ಮೀರಿದೆಯೇ? ಮೀರಿದ್ದಲ್ಲಿ ಇದಕ್ಕೆ ಕಾರಣಗಳೇನು?

ಇ) ಪ್ರಸಕ್ತ ವರ್ಷದಲ್ಲಿ ಕೃಷ್ಣರಾಜಸಾಗರ (ಕೆ.ಆರ್.ಎಸ್.) ಜಲಾಶಯದ ನೀರಿನ ಪ್ರಮಾಣ ಇಲ್ಲಿನ ಅಚ್ಚುಕಟ್ಟುಗಳಿಗೆ ಸಾಕಾಗುತ್ತದೆಯೇ? ವಿವರ ನೀಡುವುದು.

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಕಾವೇರಿ ನದಿ ಜಲಾಶಯಗಳಿಂದ ತಮಿಳುನಾಡಿಗೆ ಹರಿದಿರುವ ನೀರಿನ ಪ್ರಮಾಣ ಹಾಗೂ ಕೇಂದ್ರ ಜಲ ಆಯೋಗದ ಬಿಳಿಗುಂಡ್ಲುವಿನ ಜಲ ಮಾಪನ ಕೇಂದ್ರದ ಮಾಹಿತಿಯಂತೆ ಹರಿದಿರುವ ನೀರಿನ ಪ್ರಮಾಣ ಕೆಳಕಂಡಂತಿದೆ: